**ದಾವಣಗೆರೆ ವಿಶ್ವವಿದ್ಯಾನಿಲಯ**

ಕುಲಸಚಿವ(ಪರೀಕ್ಷಾಂಗ) ರವರ ಕಾರ್ಯಾಲಯ, ಶಿವಗಂಗೋತ್ರಿ,ದಾವಣಗೆರೆ-577002

ಇ-mail: registrarevaluation@gmail.com ದೂ.ಸಂಖ್ಯೆ : 08192-208420, 208104

ಸಂಖ್ಯೆ:ದಾವಿ/ಪವಿ/ಯು.ಜಿ/ 100 /2015-16 ದಿನಾಂಕ:22-04-2016

## ಪರಿಷ್ಕೃತಪ್ರಕಟಣೆ

ವಿಷಯ:-ಮೇ-ಜೂನ್-2016ರಲ್ಲಿ ನಡೆಯುವ ಎಲ್ಲಾ ಸ್ನಾತಕ ಪದವಿ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸುವ ಹಾಗೂ ಶುಲ್ಕ ಪಾವತಿಸಲು ಅವಧಿ ವಿಸ್ತರಿಸುವ ಬಗ್ಗೆ.

ಉಲ್ಲೇಖ:-01)ಈ ಕಛೇರಿ ಪ್ರಕಟಣೆ ಪತ್ರ ಸಂಖ್ಯೆ: ದಾವಿ/ಪವಿ/ಯು.ಜಿ/282/2015-16 ದಿನಾಂಕ:23-03-2016

02)ಮಾನ್ಯ ಕುಲಪತಿಗಳ ಮೌಖಿಕ ಆದೇಶ ದಿನಾಂಕ:21-04-2016

******

ದಾವಣಗೆರೆ ವಿಶ್ವವಿದ್ಯಾನಿಲಯದ ಎಲ್ಲಾ ಸ್ನಾತಕ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೇ-ಜೂನ್-2016ರ ಸ್ನಾತಕ ಪದವಿಯ ಪರೀಕ್ಷೆಗೆ ದಂಡ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ:15-04-2016ರವರೆಗೆ ಎಂದು ಉಲ್ಲೇಖ (01) ರ ಪ್ರಕಟಣೆಯಲ್ಲಿ ತಿಳಿಸಲಾಗಿತ್ತು. ಆದಾಗ್ಯೂ ಕೆಲವು ಕಾಲೇಜಿನ ವಿದ್ಯಾರ್ಥಿಗಳು ನಿಗದಿತ ದಿನಾಂಕದೊಳಗೆ ಅರ್ಜಿ ಸಲ್ಲಿಸದೆ, ನೇರವಾಗಿ ವಿಶ್ವವಿದ್ಯಾನಿಲಯಕ್ಕೆ ಬಂದು ಪರೀಕ್ಷಾ ಅರ್ಜಿ/ಶುಲ್ಕ ಪಾವತಿಸಲು ಅನುಮತಿ ನೀಡಬೇಕಾಗಿ ಕೋರಿರುತ್ತಾರೆ.

ಅಂತಿಮ ದಿನಾಂಕದ ನಂತರವೂ ವಿದ್ಯಾರ್ಥಿಗಳನ್ನು ವಿಶ್ವವಿದ್ಯಾನಿಲಯಕ್ಕೆ ಕಳುಹಿಸುವುದು ಸಮಂಜಸವೆನಿಸುವುದಿಲ್ಲ. ಇದೊಂದು ಬಾರಿಗೆ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಪರೀಕ್ಷಾ ಶುಲ್ಕ ಪಾವತಿಸಲು ಅವಧಿ ವಿಸ್ತರಿಸಲಾಗಿದೆ. ಇನ್ನು ಮುಂದೆ ಈ ರೀತಿ ಪುನರಾರ್ವನೆಯಾಗದಂತೆ ವಿದ್ಯಾರ್ಥಿಗಳಿಗೆ ತಿಳಿಸಲು ಕ್ರಮಕೈಗೊಳ್ಳಬೇಕು.

01) ಉಲ್ಲೇಖ (01)ರ ಪ್ರಕಟಣೆಯಲ್ಲಿ ನಿಗಧಿಪಡಿಸಿದ ಶುಲ್ಕದ ಜೊತೆಗೆ ವಿಶೇಷ ದಂಡ ಶುಲ್ಕ ರೂ.1000/- ರೊಂದಿಗೆ ಪರೀಕ್ಷಾ ಅರ್ಜಿ ಸಲ್ಲಿಸಲು ಕಡೆಯ ದಿನಾಂಕ:25-04-2016ರವರೆಗೆ ಅವಧಿ ವಿಸ್ತರಿಸಲಾಗಿದೆ.

02) ವಿದ್ಯಾರ್ಥಿಗಳ ಅನುಮೋದನಾ ಪಟ್ಟಿ ಮತ್ತು ಶುಲ್ಕದ ವಿವರವನ್ನು ದಿನಾಂಕ:26-04-2016ರಂದು ವಿಶ್ವವಿದ್ಯಾನಿಲಯಗೆ ಸಲ್ಲಿಸಬೇಕು. ನಂತರ ಬಂದ ಅರ್ಜಿಯನ್ನು ಯಾವುದೇ ಕಾರಣಕ್ಕೂ ಸ್ವೀಕರಿಸುವುದಿಲ್ಲ .

03) ಉಲ್ಲೇಖ(01)ರ ಪ್ರಕಟಣೆಯಲ್ಲಿನ ಶುಲ್ಕ/ಇತರೆ ಮಾಹಿತಿಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

**ಸೂಚನೆ:-ಸದರಿ ಮಾಹಿತಿಯನ್ನು ವಿದ್ಯಾರ್ಥಿಗಳ ಗಮನಕ್ಕಾಗಿ ಸೂಚನಾ ಫಲಕದಲ್ಲಿ ಪ್ರಕಟಿಸಲು ತಿಳಿಸಲಾಗಿದೆ.**

T.V.

ಕುಲಸಚಿವರು(ಪರೀಕ್ಷಾಂಗ)

ಕುಲಸಚಿವರು (ಪರೀಕ್ಷಾಂಗ)
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ-577002.

ಗೆ,

01 . ದಾವಣಗೆರೆ ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಸ್ನಾತಕ ಕಾಲೇಜುಗಳ ಪ್ರಾಚಾರ್ಯರುಗಳಿಗೆ.

ಪ್ರತಿ:

01. ಆಪ್ತಶಾಖೆ, ಮಾನ್ಯ ಕುಲಪತಿಗಳು, ಕುಲಸಚಿವ(ಆಡಳಿತ), ಕುಲಸಚಿವ(ಪರೀಕ್ಷಾಂಗ), ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯದ , ಶಿವಗಂಗೋತ್ರಿ , ದಾವಣಗೆರೆ.
02. ಉಪಕುಲಸಚಿವರು(ಪರೀಕ್ಷಾಂಗ) ದಾವಣಗೆರೆ ವಿಶ್ವವಿದ್ಯಾನಿಲಯದ , ಶಿವಗಂಗೋತ್ರಿ , ದಾವಣಗೆರೆ.
03. ಅಧೀಕ್ಷಕರು, ವಿಷಯ ನಿರ್ವಾಹಕರುಗಳು, ದಾವಣಗೆರೆ ವಿಶ್ವವಿದ್ಯಾನಿಲಯದ , ಶಿವಗಂಗೋತ್ರಿ , ದಾವಣಗೆರೆ.
04. ಕಛೇರಿ ಪ್ರತಿ.